# <u>ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ: ಬೆಂಗಳೂರು</u>

## <u>ಪತ್ರಿಕಾ ಪ್ರಕಟಣೆ</u>

**ವಿಷಯ: ಕೆ ಎಸ್ ಆರ್ ಟಿ ಸಿ ಯ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ "ಸ್ತ್ರೀ ಶೌಚಾಲಯ" ಪ್ರಾರಂಭ**

******

ದಿನಾಂಕ: 27.08.2020 ರಂದು, ಕೆ ಎಸ್ ಆರ್ ಟಿ ಸಿ, ಕೆಂಪೇಗೌಡ ಬಸ್ ನಿಲ್ದಾಣದಲ್ಲಿ, ಸನ್ಮಾನ್ಯ ಉಪ ಮುಖ್ಯ ಮಂತ್ರಿಗಳು, ಸಾರಿಗೆ ಇಲಾಖೆ, ಕರ್ನಾಟಕ ಸರ್ಕಾರ ರವರು, ನಿಗಮವು ಅನುಷ್ಠಾನಗೊಳಿಸಿರುವ ನೂತನ ಉಪಕ್ರಮ "ಸ್ತ್ರೀ ಶೌಚಾಲಯ"ವನ್ನು ಉದ್ಘಾಟಿಸಿದರು. ಶ್ರೀ.ಶಿವಯೋಗಿ ಸಿ.ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ, ಶ್ರೀ. ಹೇಮಂತ್, ಮುಖ್ಯಸ್ಥರು, **(CSR) BIAL,** ಡಾ.ರಾಮ್ ನಿವಾಸ್ ಸೆಪಟ್, ಭಾಪೊಸೇ, ನಿರ್ದೇಶಕರು (ಭ&ಜಾ), ಶ್ರೀ.ಟಿ.ವೆಂಕಟೇಶ್, ಕಆಸೇ, ನಿರ್ದೇಶಕರು(ಸಿ&ಪ), ಕರಾರಸಾಸಂಸ್ಥೆ ರವರುಗಳು ಉಪಸ್ಥಿತರಿದ್ದರು.

ಕೆಎಸ್‌ಆರ್‌ಟಿಸಿಯು ಒಂದು ಅನುಪಯುಕ್ತ ಬಸ್ಸನ್ನು (Scrap Bus) ಸುಸಜ್ಜಿತ ಮಹಿಳಾ ಶೌಚಾಲಯವನ್ನಾಗಿ ನಿರ್ಮಿಸಲಾಗಿದೆ. ಇದನ್ನು "ಸ್ತ್ರೀ ಶೌಚಾಲಯ"ಎಂದು ಹೆಸರಿಸಲಾಗಿದೆ. ಸ್ವಚ್ಛತೆಯತ್ತ ಮತ್ತೊಂದು ಹೆಜ್ಜೆಯನ್ನು ಇಟ್ಟಿದೆ. ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರಾಧಿಕಾರ ಬೆಂಗಳೂರು ರವರು ಸದರಿ ಶೌಚಾಲಯದ ವೆಚ್ಚವನ್ನು ತಮ್ಮ ಸಾಮಾಜಿಕ ಕಳಕಳಿ **(CSR)** ಯೋಜನೆಯಡಿ ನೀಡಿರುತ್ತಾರೆ.

- ಸದರಿ ಶೌಚಾಲಯದಲ್ಲಿ ಮಗುವಿಗೆ ಹಾಲುಣಿಸುವ ಸ್ಥಳ, ಸ್ಯಾನಿಟರಿ ನ್ಯಾಪ್‌ಕಿನ್ ವೆಂಡಿಂಗ್ ಯಂತ್ರ, ಇನ್ಸಿನಿರೇಟರ್, ಮಗುವಿಗೆ ಡೈಪರ್ ಬದಲಿಸುವ ಸ್ಥಳ, ಭಾರತೀಯ ಮತ್ತು ವಿದೇಶಿ ಮಾದರಿಯ ಶೌಚಾಲಯಗಳು, ಕೈ ತೊಳೆಯುವ ಬೇಸಿನ್‌ಗಳು, ಸಂವೇದಕ ದೀಪಗಳು, ಸಂಪೂರ್ಣ ಸೌರ ವಿದ್ಯುತ್ ಅಳವಡಿಸಲಾಗಿದೆ.
- ಶೌಚಾಲಯದ ನಿರ್ಮಾಣ ವೆಚ್ಚ ಒಟ್ಟು ರೂ.12 ಲಕ್ಷಗಳಾಗಿರುತ್ತದೆ.

ಮಹಿಳಾ ಸ್ವಾಸ್ಥ್ಯ ಸಮಾಜ ನಿಗಮದ ಕಾಲಜಿಯಾಗಿದೆ. ದೇಶದ ರಸ್ತೆ ಸಾರಿಗೆ ನಿಗಮಗಳಲ್ಲಿಯೇ ಪ್ರಪ್ರಥಮ ಭಾರಿಗೆ ಇಂತಹ ಸುಸಜ್ಜಿತ ಶೌಚಾಲಯವನ್ನು ಅನುಪಯುಕ್ತ ಬಸ್ಸಿನಲ್ಲಿ ನಿರ್ಮಿಸಲಾಗಿದೆ. ನಿಗಮವು ಹಲವು

ಮಹಿಳಾ ಸ್ನೇಹಿ ಉಪಕ್ರಮಗಳನ್ನು ಜಾರಿಗೆ ತಂದಿದೆ. ಬಸ್ ನಿಲ್ದಾಣ ಹಾಗೂ ಬಸ್ಸುಗಳನ್ನು ಮಹಿಳಾ ಸ್ನೇಹಿಯಾಗಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನವು ನಿತಂತರವಾಗಿ ಮುಂದುವರೆದಿದೆ.

ಬಸ್ ನಿಲ್ದಾಣಗಳಲ್ಲಿ ಮಹಿಳಾ ಪ್ರಯಾಣಿಕರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದರೊಂದಿಗೆ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡುವುದು ಪ್ರಮುಖ ಕಾಳಜಿಯೆಂದು ನಿಗಮವು ಮನಗಂಡಿದೆ. ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ನಿಗಮದ ಪ್ರಥಮ ಆದ್ಯತೆಯಾಗಿದ್ದು, ಕೊವಿಡ್-19 ಸಂದರ್ಭದಲ್ಲಿ ಸದರಿ ಶೌಚಾಲಯ ಪ್ರಾರಂಭ ಮಾದರಿಯಾಗಲಿದೆ. ಸ್ವಚ್ಛ ಭಾರತದ ಪರಿಕಲ್ಪನೆಯನ್ನು ದಸಾಕಾರ ಮಾಡುವ ನಿಟ್ಟಿನಲ್ಲಿ ಕೆ ಎಸ್ ಆರ್ ಟಿ ಸಿ ಯ ಪ್ರಯತ್ನ ಶ್ಲಾಘನೀಯ ಎಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಸಾರಿಗೆ ಇಲಾಖೆಯವರು ತಿಳಿಸಿದರು. ಇದೇ ರೀತಿಯಲ್ಲಿ ಅನುಪಯುಕ್ತ ಬಸ್ಸುಗಳನ್ನು ವಿವಿಧ ಯೋಜನೆಗಳಿಗೆ ಉಪಯೋಗಿಸಲು ಸಲಹೆ ನೀಡಿದರು.

ಸದರಿ ಬಸ್ಸು ಅನುಪಯುಕ್ತವಾಗಿರುವುದರಿಂದ ಚಲಿಸುವುದಿಲ್ಲ. ಕೆಂಪೇಗೌಡ ಬಸ್ ನಿಲ್ದಾಣ , ಟರ್ಮಿನಲ್-1 ರಲ್ಲಿ ಮಹಿಳಾ ಪ್ರಯಾಣಿಕರ ಸೇವೆಗಾಗಿ ನಿಲ್ಲಿಸಲಾಗಿರುತ್ತದೆ.

ಸಹಿ/-

ಸಾರ್ವಜನಿಕ ಸಂಪರ್ಕಾಧಿಕಾರಿ